# ತೊಗಟವೀರ ಕ್ಷತ್ರಿಯ ಮತ್ತು ಕನ್ನಡ ದೇವಾಂಗ ಸಮುದಾಯಗಳ ಆಚರಣೆಗಳಲ್ಲಿನ ಸಾಮ್ಯತೆ ಮತ್ತು ಭಿನ್ನತೆ

**ಮೋಹನ್ ಕುಮಾರ್ ಆರ್.**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15791359

## ABSTRACT:

ಭಾರತವು ಹಲವು ವಿಷಯಗಳಲ್ಲಿ ವೈವಿಧ್ಯತೆಯ ರಾಷ್ಟ್ರವಾಗಿದ್ದು, ಭಾರತದಲ್ಲಿರುವಷ್ಟು ಸಮುದಾಯಗಳು ಪ್ರಪಂಚದ ಬೇರೆ ಯಾವ ದೇಶಗಳಲ್ಲೂ ಕಾಣಸಿಗುವುದಿಲ್ಲ. ಎಲ್ಲಾ ಸಮುದಾಯಗಳಲ್ಲಿ ಜಾತಿ, ಉಪಜಾತಿಗಳಿದ್ದು ಅವುಗಳೊಳಗೆ ಆಚಾರ-ವಿಚಾರಗಳಲ್ಲಿ ಹಲವಾರು ಸಾಮ್ಯತೆಗಳಿದ್ದರೂ ಭಿನ್ನತೆಗಳು ಸಾಕಷ್ಟಿವೆ. ಸಮುದಾಯಗಳೊಳಗೆ ಆಹಾರಪದ್ಧತಿ, ಶಾಸ್ತ್ರ-ಸಂಪ್ರದಾಯಗಳ ಆಚರಣೆಗಳಲ್ಲಿರುವ ವಿಶಿಷ್ಟತೆ ಮತ್ತು ಭಿನ್ನತೆಗಳು ಹಲವು ಬಗೆಯ ಅಧ್ಯಯನಕ್ಕೆ ಎಡೆಮಾಡಿಕೊಟ್ಟಿವೆ. ಕರ್ನಾಟಕದಲ್ಲಿ ಹಲವಾರು ಧರ್ಮಗಳನ್ನು ಅನುಸರಿಸುವ ಜನಸಮುದಾಯಗಳಿದ್ದು, ಹಿಂದೂ ಧರ್ಮದ ಹಲವಾರು ಸಮುದಾಯಗಳಲ್ಲಿರುವ ಆಹಾರಸಂಸ್ಕೃತಿ, ಸಂಪ್ರದಾಯ, ಆಚರಣೆಗಳ ತೌಲನಿಕ ಅಧ್ಯಯನವು ವ್ಯಕ್ತಿಯ ಅಸ್ಮಿತೆಯ ಕಾರಣಕ್ಕಾಗಿ ಮುಖ್ಯವೆನಿಸುತ್ತದೆ.

## KEYWORDS:

ಆಹಾರ ಸಂಸ್ಕೃತಿ, ಜನ್ಮ, ಮದುವೆ, ಆಚರಣೆಗಳು, ಸ್ತ್ರೀ, ಮರಣ.

ಭಾರತದಲ್ಲಿ ನೇಕಾರಿಕೆ ಎಂಬುದು ಒಂದು ಪ್ರಮುಖ ವೃತ್ತಿ. ಈ ವೃತ್ತಿಯನ್ನು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುವ ಹಲವಾರು ಸಮುದಾಯಗಳು ಭಾರತದಲ್ಲಿ ಕಂಡುಬರುತ್ತವೆ. ಕರ್ನಾಟಕದಲ್ಲಿ ನೆಲೆಸಿರುವ ನೇಕಾರಿಕೆಯನ್ನು ತಮ್ಮ ಕುಲಕಸುಬನ್ನಾಗಿ ಹೊಂದಿರುವ ಸಮುದಾಯಗಳಿವೆ. "ಪಾರಂಪರಿಕವಾಗಿ ನೇಕಾರಿಕೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದವರಲ್ಲಿ ಪ್ರಮುಖವಾದ ಸಮುದಾಯಗಳು ದೇವಾಂಗ, ಪದ್ಮಶಾಲಿ, ಸ್ವಕುಳಶಾಲಿ, ಕುರುಹಿನಶೆಟ್ಟಿ, ತೊಗಟವೀರರು ಇತ್ಯಾದಿ. ಇದರ ಜೊತೆಗೆ ಜೀವನೋಪಾಯಕ್ಕಾಗಿ ಹಾಗೂ ಲಾಭಗಳಿಕೆಗಾಗಿ ಇತ್ತೀಚೆಗೆ ಲಿಂಗಾಯತರು, ಕ್ರಿಶ್ಚಿಯನ್ನರು ಹಾಗೂ ಇತರೆ ಸ್ಥಳೀಯ ಸಮುದಾಯಗಳು ಕೂಡ ನೇಕಾರಿಕೆಯನ್ನು ಅವಲಂಬಿಸಿರುವುದನ್ನು ಕಾಣುತ್ತೇವೆ"[1]. ಈ ನೇಕಾರ ಸಮುದಾಯಗಳು ಶತಶತಮಾನಗಳಿಂದಲೂ ನೇಕಾರಿಕೆಯನ್ನೇ ನಂಬಿ ಅದನ್ನೇ ತಮ್ಮ ಕುಲವೃತ್ತಿಯನ್ನಾಗಿಸಿಕೊಂಡು ಜೀವನ ಸಾಗಿಸುತ್ತಿವೆ. ಅದರ ಜೊತೆಗೆ

ಕೃಷಿಯನ್ನು ಜೀವನಾಧಾರವಾಗಿಸಿಕೊಂಡಿವೆ. ಇತ್ತೀಚಿನ ದಶಕಗಳಲ್ಲಿ ಶಿಕ್ಷಣ ಪಡೆದವರು ವ್ಯಾಪಾರ ವಾಣಿಜ್ಯಗಳಂತಹ ಬೇರೆ ಬೇರೆ ಕ್ಷೇತ್ರಗಳಿಗೆ ತೆರಳಿ ಜೀವನವನ್ನು ರೂಪಿಸಿಕೊಳ್ಳುತ್ತಿದ್ದಾರೆ. "ನೇಕಾರ ಜನಾಂಗದವರಲ್ಲಿ ಹೆಣ್ಣು ದೇವತೆಗಳನ್ನು ಪೂಜಿಸುವುದೇ ಅಧಿಕವಾಗಿ ಕಂಡುಬರುತ್ತದೆ. ದಕ್ಷಿಣ ಕನ್ನಡ ಅವಿಭಜಿತ ಜಿಲ್ಲೆಯ ಪದ್ಮಶಾಲಿ ಶೆಟ್ಟಿಗಾರ ಜನಾಂಗದವರೆಲ್ಲ ಮಹಾಮಾಯಿಯನ್ನೇ ಆರಾಧ್ಯ ದೈವವಾಗಿ ಸ್ವೀಕರಿಸಿದರೆ, ದೇವಾಂಗದವರು ಬನಶಂಕರಿ ದೇವಿಯನ್ನು, ತೊಗಟವೀರರು ಚೌಡೇಶ್ವರಿ ದೇವಿಯನ್ನು ಮತ್ತು ಹುಲಿಗೆಮ್ಮ, ಯಲ್ಲಮ್ಮ ಹೀಗೆ ಬೇರೆ ಬೇರೆಯವರು ಹೆಣ್ಣು ದೇವತೆಯನ್ನು ಆರಾಧ್ಯ ದೈವವನ್ನಾಗಿ ಮಾಡಿಕೊಂಡಿರುವುದನ್ನು ಕಾಣುತ್ತೇವೆ"[2]. ಕರ್ನಾಟಕದಲ್ಲಿರುವ ತೊಗಟವೀರ ಕ್ಷತ್ರಿಯ ಸಮುದಾಯ ಮತ್ತು ಕನ್ನಡ ದೇವಾಂಗ ಸಮುದಾಯದವರು ಚೌಡೇಶ್ವರಿ ದೇವಿಯನ್ನು ಆರಾಧಿಸುವುದರಿಂದ ಹಾಗೂ ಈ ಎರಡು ಸಮುದಾಯಗಳು ಮೂಲದಲ್ಲಿ ಒಂದೇ ಆಗಿದ್ದು, ಕಾಲಾನಂತರ ಆಹಾರ ಸಂಸ್ಕೃತಿಯಿಂದಾಗಿ ಬೇರ್ಪಟ್ಟನೆಂಬ ಮಾಹಿತಿಯನ್ನು ಕ್ಷೇತ್ರಕಾರ್ಯದಲ್ಲಿ ವಕ್ತೃಗಳಿಂದ ಸಂಗ್ರಹಿಸಿದ್ದರಿಂದಾಗಿ ಈ ಎರಡೂ ಸಮುದಾಯಗಳ ಆಚರಣೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದರ ಮೂಲಕ ಹೊಸ ವಿಚಾರಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಹಾಗೂ ಈ ಎರಡೂ ಸಮುದಾಯಗಳ ಜಾನಪದೀಯ ಅಥವಾ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿ ಹಿರಿದಾದುದರಿಂದ ಕೇವಲ ಆಚರಣೆಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿ, ಪ್ರಮುಖವಾಗಿ ಜನ್ಮ ಸಂಬಂಧಿತ ಆಚರಣೆಗಳು, ಮದುವೆ ಸಂಬಂಧಿತ ಆಚರಣೆಗಳು, ಸ್ತ್ರೀ ಸಂಬಂಧಿತ ಆಚರಣೆಗಳು ಮತ್ತು ಮರಣ ಸಂಬಂಧಿತ ಆಚರಣೆಗಳನ್ನು ಗಮನಿಸಿ ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ತೊಗಟವೀರ ಕ್ಷತ್ರಿಯ ಸಮುದಾಯದಲ್ಲಿ ಎರಡು ಪಂಗಡಗಳಿವೆ. ಅವೆಂದರೆ ನಾಮದವರು ಮತ್ತು ಮೋಡಿಯವರು ಅಥವಾ ಭೋವಿಯರು. ನಾಮದವರು ಎಲ್ಲಾ ಸಂದರ್ಭದ ಆಚರಣೆಗಳಲ್ಲಿ ಮಾಂಸಾಹಾರವನ್ನೇ ಹೆಚ್ಚಾಗಿ ಬಳಸುವರು. ಆದರೆ ಮೋಡಿಯವರು ಮಾಂಸಾಹಾರವನ್ನು ಸೇವಿಸಿದರೂ ಎಲ್ಲಾ ಸಂದರ್ಭದ ಆಚರಣೆಗಳಲ್ಲಿ ಸಸ್ಯಹಾರವನ್ನೇ ಬಳಸುತ್ತಾರೆ. ದೇವಾಂಗ ಸಮುದಾಯದವರಲ್ಲಿ ತೆಲುಗು ದೇವಾಂಗದವರು ಮತ್ತು ಕನ್ನಡ ದೇವಾಂಗದವರು ಎಂಬ ವಿಂಗಡಣೆ ಇದೆ. ಕರ್ನಾಟಕದಲ್ಲಿ ನೆಲೆಸಿರುವವರು ಕನ್ನಡ ದೇವಾಂಗದವರಾದರೆ, ಆಂಧ್ರ ಮತ್ತು ತೆಲಂಗಾಣದಲ್ಲಿ ನೆಲೆಸಿರುವವರು ತೆಲುಗು ದೇವಾಂಗದವರಾಗಿದ್ದಾರೆ. ಈ ಲೇಖನದಲ್ಲಿ ಕನ್ನಡ ದೇವಾಂಗದವರ ಆಚರಣೆಗಳನ್ನು ಮಾತ್ರವೇ ಪರಿಗಣಿಸಲಾಗಿದೆ. ಕನ್ನಡ ದೇವಾಂಗದವರಲ್ಲಿ ಕನ್ನಡ ದೇವಾಂಗ ಬ್ರಾಹ್ಮಣ ಮತ್ತು ಕನ್ನಡ ದೇವಾಂಗ ಶೆಟ್ಟಿ ಎಂಬ ಎರಡು ಪಂಗಡಗಳಿವೆ. ಈ ಎರಡು ಪಂಗಡದವರಲ್ಲಿ ನಾಮದವರು ಮತ್ತು ಗಂಧದವರು ಎಂಬ ಉಪ ಪಂಗಡಗಳಿವೆ. ಇವರಲ್ಲಿ ಕನ್ನಡ ದೇವಾಂಗ ಶೆಟ್ಟಿ

ಪಂಗಡದಲ್ಲಿನ ನಾಮದವರು ಮಾತ್ರವೇ ಮಾಂಸಾಹಾರಿಗಳಾಗಿದ್ದು, ಮಿಕ್ಕವರು ಸಂಪೂರ್ಣ ಸಸ್ಯಾಹಾರಿಗಳಾಗಿರುತ್ತಾರೆ.

**ಜನ್ಮ ಸಂಬಂಧಿತ ಆಚರಣೆಗಳಲ್ಲಿನ ಸಾಮ್ಯತೆ ಮತ್ತು ಭಿನ್ನತೆ:**

ಹೆಣ್ಣು ಗರ್ಭಿಣಿಯಾದ ನಂತರ ಸಾಮಾನ್ಯವಾಗಿ ಒಂಬತ್ತನೇ ತಿಂಗಳಿಗೆ ಗಂಡನ ಮನೆಯವರು ಸೀಮಂತವನ್ನು ಮಾಡಿ ಆಕೆಯನ್ನು ತವರಿನ ಮನೆಗೆ ಕಳುಹಿಸಿಕೊಡಲಾಗುತ್ತದೆ. ಸೀಮಂತದಲ್ಲಿ ಗಂಡನೇ ಮೊದಲು ಆಕೆಗೆ ಅರಿಶಿಣ-ಕುಂಕುಮ ಹಚ್ಚಿ, ಬಳೆಗಳನ್ನು ತೊಡಿಸಿ, ಸಿಹಿಯನ್ನು ತಿನ್ನಿಸಿ, ಅಕ್ಷತೆಯಿಂದ ಆಶೀರ್ವದಿಸುತ್ತಾನೆ. ಸೀಮಂತದ ಆಚರಣೆ ಗಂಡನ ಮನೆಯಲ್ಲಿ ಗಂಡನ ಮನೆಯವರೇ ಮಾಡಬೇಕಾದ ಶಾಸ್ತ್ರವಾಗಿದೆ. ಮಡಿಲಕ್ಕಿಯಲ್ಲಿ ನೀಡಲಾಗುವ ವಸ್ತುಗಳೆಂದರೆ, ಎಲೆ-ಅಡಿಕೆ, ಅರಿಶಿಣ-ಕುಂಕುಮ, ಐದು ಬಗೆಯ ಹಣ್ಣುಗಳು, ಹಸಿರು ಗಾಜಿನ ಬಳೆಗಳು. ಸೀಮಂತದ ಆಚರಣೆಯಲ್ಲಿ ಆಕೆಯ ಮುಂದೆ ಒಂಬತ್ತು ಬಗೆಯ ತಿಂಡಿ-ತಿನಿಸುಗಳನ್ನು ಒಂಬತ್ತು ತಟ್ಟೆಗಳಲ್ಲಿ ಇಟ್ಟಿರುತ್ತಾರೆ. ಗರ್ಭಿಣಿ ಹೆಣ್ಣಿಗೆ ಅರಿಶಿನ-ಕುಂಕುಮ ಹಚ್ಚಿ, ಬಳೆಗಳನ್ನು ತೊಡಿಸುವ ಮುತ್ತೈದೆಯರ ಸಂಖ್ಯೆ ಮೂರು ಅಥವಾ ಐದು ಅಥವಾ ಒಂಬತ್ತು ಆಗಿರುತ್ತದೆ. ತಾಯಿ ಮತ್ತು ಅತ್ತೆ ಮೊದಲಿಗೆ ಗರ್ಭಿಣಿಗೆ ಅರಿಶಿಣ-ಕುಂಕುಮ ಹಚ್ಚುವುದಿಲ್ಲ. ಗಂಡನ ಮನೆಯಲ್ಲಿ ಸೀಮಂತ ಶಾಸ್ತ್ರ ಮುಗಿದ ದಿನವೇ ಗರ್ಭಿಣಿಯು ತನ್ನ ತವರಿಗೆ ತೆರಳಬೇಕು. ಹೆರಿಗೆಯ ನಂತರ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸುವ ದಿನ ಗಂಗೆ ಪೂಜೆಯನ್ನು ತಾಯಿಯ ಕೈಯಿಂದ ಮಾಡಿಸುವರು. ಅದಕ್ಕೆ ಬಳಸುವ ಸೊಪ್ಪುಗಳು ಮತ್ತು ಗಡಿಗೆಗಳ ಸಂಖ್ಯೆ ಮೂರು ಅಥವಾ ಐದು. ತೊಟ್ಟಿಲು ಶಾಸ್ತ್ರದಲ್ಲಿ ಸೋದರಮಾವನೇ ತೊಟ್ಟಿಲನ್ನು ತಂದು ಕಟ್ಟಬೇಕು ಹಾಗೂ ಸೋದರತ್ತೆಯೇ ತೊಟ್ಟಿಲಿಗೆ ಮೊದಲ ಪೂಜೆ ಮಾಡಬೇಕು. ನಾಮಕರಣವನ್ನು ವಿಜೃಂಭಣೆಯಿಂದ ಆಚರಿಸುವುದು ಸಾಮಾನ್ಯವಾಗಿ ಮೂರನೇ ತಿಂಗಳಿಗೆ ಅಥವಾ ಐದನೇ ತಿಂಗಳಿಗೆ ಅಥವಾ ಒಂಬತ್ತನೇ ತಿಂಗಳಿಗೆ ಆಗಿರುತ್ತದೆ. ಗಂಡುಮಗುವಿಗೆ ತಂದೆಯ ಕಡೆಯ ತಾತ ಅಥವಾ ಮುತ್ತಾತಂದಿರ, ಹೆಣ್ಣುಮಗುವಿಗೆ ಅಜ್ಜಿ ಅಥವಾ ಮುತ್ತಜ್ಜಿಯರ ಹೆಸರನ್ನು ಇಡುತ್ತಾರೆ. ಮಗುವಿಗೆ ಕೇಶಮುಂಡನ ಮಾಡಿಸುವುದು ಒಂಬತ್ತನೇ ತಿಂಗಳು ಅಥವಾ ಹನ್ನೊಂದನೇ ತಿಂಗಳಿನಲ್ಲಿ. ಇದು ತಪ್ಪಿದರೆ ಮೂರನೇ ವರ್ಷ ಅಥವಾ ಐದನೇ ವರ್ಷದಲ್ಲಿ ಕೇಶಮುಂಡನ ಶಾಸ್ತ್ರ ಮಾಡಲಾಗುವುದು. ಸಾಮಾನ್ಯವಾಗಿ ಮುನೇಶ್ವರನಿಗೆ ಕೂದಲು ಕೊಡುವುದು ಪದ್ಧತಿ. ಕೇಶಮುಂಡನ ಮಾಡಿದ ನಂತರ ದೇವರಿಗೆ ಎಡೆ ಇಡುವುದು 'ಸಿಹಿ ಪೊಂಗಲ್ ಅನ್ನ'ವನ್ನು ಮಾತ್ರ. ಮಗುವಿಗೆ ಕಿವಿ ಚುಚ್ಚುವ ಶಾಸ್ತ್ರದಲ್ಲಿ ಎರಡು ಕಿವಿಗಳಿಗೆ 'ಮುರಾ'ವನ್ನು ಚುಚ್ಚುವರು. ಈ ಎಲ್ಲಾ ಸಂದರ್ಭಗಳ ಆಚರಣೆಗಳು ಈ ಎರಡೂ ಸಮುದಾಯಗಳಲ್ಲಿರುವ ಸಾಮ್ಯತೆಯ ಅಂಶಗಳು.

ಹೆಣ್ಣು ಗರ್ಭಿಣಿಯಾದ ನಂತರ ಐದನೇ ತಿಂಗಳಿನಲ್ಲಿ ಆಕೆಯ ತವರಿನವರು ಮನೆಗೆ ಕರೆತಂದು ಮೂರು ದಿನಗಳ ಕಾಲ ಆರೈಕೆ ಮಾಡುವರು. ಒಂಬತ್ತು ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿಯನ್ನು ಗರ್ಭಿಣಿಗೆ ಕುಡಿಸುವರು. ನಂತರ ಏಳನೇ ತಿಂಗಳಿನಲ್ಲಿ ಮತ್ತೆ ಆಕೆಯನ್ನು ತವರಿಗೆ ಕರೆತಂದು ಐದು ದಿನಗಳ ಕಾಲ ಆರೈಕೆ ಮಾಡುವರು. ಆಕೆಗೆ ಪ್ರತಿದಿನ ರಾತ್ರಿ ಕೇಸರಿ ಮಿಶ್ರಿತ ಹಾಲನ್ನು ನೀಡುವುದು ಕನ್ನಡ ದೇವಾಂಗ ಸಮುದಾಯದವರಲ್ಲಿದೆ. ಆದರೆ ಇದು ತೊಗಟವೀರ ಕ್ಷತ್ರಿಯ ಸಮುದಾಯದವರಲ್ಲಿ ಆಚರಣೆಯಲ್ಲಿಲ್ಲ. ತೊಗಟರು ಮಗು ಜನಿಸಿದ ಒಂಬತ್ತನೇ ದಿನಕ್ಕೆ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸಿ, ಸೂತಕವನ್ನು ಕಳೆದುಕೊಂಡರೆ ಕನ್ನಡ ದೇವಾಂಗದವರು ಇದನ್ನು ಹನ್ನೊಂದನೇ ದಿನಕ್ಕೆ ಆಚರಿಸುವರು. ಮಗು ಹುಟ್ಟಿದ ಎರಡನೇ ದಿನಕ್ಕೆ ವೀಳ್ಯದೆಲೆಯ ಮೇಲೆ ಅರಳೆಣ್ಣೆಯನ್ನು ಹಚ್ಚಿ ಅದನ್ನು ಸ್ವಲ್ಪ ಬಿಸಿ ಮಾಡಿ ಅದನ್ನು ಮಗುವಿನ ನೆತ್ತಿಯ ಮೇಲೆ ಅಂಟಿಸುವುದು ಕನ್ನಡ ದೇವಾಂಗದವರಲ್ಲಿದೆ. ಈ ಪದ್ಧತಿ ತೊಗಟರಲ್ಲಿ ಇಲ್ಲ. ವ್ಯಕ್ತಿಯ ಜನನ ಮತ್ತು ಸಾವಿನ ಸಂದರ್ಭದಲ್ಲಿ ಆಚರಿಸುವ 'ಸುಟ್ಟು ಪುನೋಜನ' ಎಂಬ ಶಾಸ್ತ್ರ ಕನ್ನಡ ದೇವಾಂಗದವರಲ್ಲಿದೆ. ಇದು ತೊಗಟರಲ್ಲಿ ಇಲ್ಲ. ತೊಟ್ಟಿಲು ಶಾಸ್ತ್ರ ಮುಗಿದ ಮೇಲೆ ಮಗು ಜನಿಸಿದ ನಲವತ್ತೈದು ದಿನಗಳ ನಂತರ ತಾಯಿಯ ಕೈಯಿಂದ ಗಂಗೆ ಪೂಜೆ ಮಾಡಿಸುವರು. ನಂತರ ಮಗು ಬಳಸಿದ ಮೈಲಿಗೆಯ ಬಟ್ಟೆಯನ್ನು ಬಾಣಂತಿಯ ಕೈಯಿಂದ ಒಗೆಸುವ ಮೂಲಕ ತಣ್ಣೀರನ್ನು ಮುಟ್ಟಿಸುವ ಶಾಸ್ತ್ರವನ್ನು ಕನ್ನಡ ದೇವಾಂಗದವರು ಮಾಡಿಸುವರು, ಇದು ತೊಗಟರಲ್ಲಿ ಇಲ್ಲ. ಮಗು ತಾನಾಗಿಯೇ ಮನೆಯ ಹೊಸ್ತಿಲನ್ನು ದಾಟಿದಾಗ ಮಾಡುವ 'ಹೊಸ್ತಿಲು ಪೂಜೆ'ಯಲ್ಲಿ ಮಗುವಿನ ತಂದೆ ಮಗುವನ್ನು ತೊಡೆಯ ಮೇಲೆ ಕೂರಿಸಿಕೊಳ್ಳುತ್ತಾನೆ. ನಂತರ ಮಗುವಿನ ತಾಯಿ ಹೊಸ್ತಿಲಿಗೆ ಪೂಜೆ ಮಾಡುವುದು ನಡೆಯುತ್ತದೆ. ಆದರೆ ತೊಗಟರಲ್ಲಿ ಮಗುವನ್ನು ಆ ಮಗುವಿನ ಸೋದರಮಾವ ಹೊಸ್ತಿಲ ಮೇಲೆ ಕುಳಿತು ಮಗುವನ್ನು ತೊಡೆಯ ಮೇಲೆ ಕೂರಿಸಿಕೊಳ್ಳುತ್ತಾನೆ ಹಾಗೂ ಅಂದಿನ ದಿನ ಯಾವುದಾದರೂ ಒಂದು ಸಿಹಿಯನ್ನು ಮನೆಯಲ್ಲಿ ಮಾಡಲಾಗುತ್ತದೆ. ಆದರೆ ಕನ್ನಡ ದೇವಾಂಗದವರು ಪೂಜೆ ಮಾಡಿದಾಗ ಹೊಡೆದ ಒಂದೇ ತೆಂಗಿನಕಾಯಿಯಿಂದ ಸಿಹಿ ಕಡುಬನ್ನೇ ಮಾಡಬೇಕೆಂಬ ಪದ್ಧತಿ ಇದೆ ಹಾಗೂ ಅಂದಿನ ದಿನ ಐದು ಅಥವಾ ಒಂಬತ್ತು ಜನ ಮುತ್ತೈದೆಯರನ್ನು ಕರೆಸಿ, ಅವರಿಗೆ ಆರತಿ ಮಾಡಿ ಅವರಿಂದ ಆಶೀರ್ವಾದ ಪಡೆಯುವುದು ಕಂಡುಬರುವುದು, ಆದರೆ ಇದು ತೊಗಟವೀರರಲ್ಲಿ ಕಾಣಬರುವುದಿಲ್ಲ. ಕನ್ನಡ ದೇವಾಂಗದವರು ಚೌಡೇಶ್ವರಿ ದೇವಿಯನ್ನು ಆರಾಧಿಸಿದರೂ ಆಕೆಗೆ ಮುಡಿ ಕೊಡುವುದಿಲ್ಲ. ಆದರೆ ಬನಶಂಕರಿ ದೇವಿಗೆ ಮುಡಿ ಕೊಡುವರು. ತೊಗಟರು ಮುನೇಶ್ವರನಿಗೆ ಮತ್ತು ಚೌಡೇಶ್ವರಿಗೂ ಮುಡಿ ಕೊಡುವವರು ಇದ್ದಾರೆ. ಇವರು ಮಗುವಿಗೆ ಮಾತ್ರ ಕೇಶಮುಂಡನ ಮಾಡಿಸುವರು. ಆದರೆ ಕನ್ನಡ ದೇವಾಂಗದವರಲ್ಲಿ

ತಂದೆ ಮತ್ತು ಮಗ ಇಬ್ಬರಿಗೂ ಕೇಶಮುಂಡನ ಮಾಡಿಸುವರು. ತೊಗಟರು ಮುನೇಶ್ವರನಿಗೆ ಹೆಚ್ಚಾಗಿ ಮುಡಿ ಕೊಡುವರು ಹಾಗೂ ಜೋಡಿ ಕೋಳಿಗಳನ್ನು ಮತ್ತು ಕುರಿಗಳನ್ನು ಬಲಿಕೊಟ್ಟು ನಂತರ ಮಾಂಸಾಹಾರವನ್ನು ಬಂಧು-ಬಳಗದವರ ಜೊತೆ ಸೇವಿಸುವರು. ಆದರೆ ಕನ್ನಡ ದೇವಾಂಗದವರಲ್ಲಿ ದೇವರಿಗೆ ಪ್ರಾಣಿಗಳನ್ನು ಬಲಿಕೊಟ್ಟರೂ ಅದನ್ನು ಮಾಂಸ ಸೇವಿಸುವವರಿಗೆ ನೀಡುತ್ತಾರೆಯೇ ಹೊರತು ಬಂಧು-ಬಳಗದವರ ಜೊತೆಗೆ ಮಾಂಸಾಹಾರ ಸೇವನೆ ಮಾಡುವುದಿಲ್ಲ. ಅವರು ಸಸ್ಯಹಾರವನ್ನೇ ಉಣಬಡಿಸುವರು. ತೊಗಟರಲ್ಲಿ ಮಗುವಿಗೆ ಕೇಶಮುಂಡನ ಮಾಡಿಸುವಾಗ ಸೋದರಮಾವ ತನ್ನ ತೊಡೆಯ ಮೇಲೆ ಕೂರಿಸಿಕೊಂಡರೆ ಕನ್ನಡ ದೇವಾಂಗದವರಲ್ಲಿ ತಂದೆಯೇ ಮಗುವನ್ನು ತೊಡೆಯ ಮೇಲೆ ಕೂರಿಸಿಕೊಳ್ಳುತ್ತಾನೆ ಮತ್ತು ಸೋದರಮಾವ ಒಣಕೊಬ್ಬರಿಯ ಬಟ್ಟಲನ್ನು ಮತ್ತು ಬೆಲ್ಲದ ಅಚ್ಚನ್ನು ಮಗುವಿನ ಬಲಗಿವಿಯ ಬಳಿ ಎರಡು ಕೈಗಳಿಂದ ಮುರಿಯುತ್ತಾನೆ. ಇದು ತೊಗಟರಲ್ಲಿ ಕಂಡುಬರುವುದಿಲ್ಲ.

**ಸ್ತ್ರೀ ಸಂಬಂಧಿತ ಆಚರಣೆಯಲ್ಲಿನ ಸಾಮ್ಯತೆ ಮತ್ತು ಭಿನ್ನತೆ:**

ಹೆಣ್ಣು ಮಗು ಮೊದಲ ಬಾರಿಗೆ ಋತುಮತಿಯಾದರೆ ಆ ವಿಚಾರವನ್ನು ತನ್ನ ತಾಯಿಗೆ ಮೊದಲು ತಿಳಿಸುವಂತಿಲ್ಲ. ಅದನ್ನು ಬೇರೊಬ್ಬ ಹಿರಿಯ ಸ್ತ್ರೀಗೆ ಮೊದಲು ತಿಳಿಸುವುದು. ಆಕೆಗೆ ಮೊದಲ ಗುಡಿಸಲು ಹಾಕುವುದು ಸೋದರಮಾವನೇ ಆಗಿರುತ್ತಾನೆ. ಆಕೆಗೆ ದೊಡ್ಡ ಒಸಗೆಯನ್ನು ಹಾಕುವವರೆಗೆ ಸಾತ್ವಿಕ ಆಹಾರವನ್ನೇ ನೀಡಲಾಗುತ್ತದೆ. ಆಕೆಯನ್ನು ಪ್ರತ್ಯೇಕ ಕೋಣೆಯಲ್ಲಿ ಇರಿಸಲಾಗುವುದು. ಆಕೆ ದೇವರಕೋಣೆಯನ್ನು ಪ್ರವೇಶಿಸುವಂತಿಲ್ಲ. ಮನೆಯಿಂದ ಹೊರಗೆ ಓಡಾಡುವಂತಿಲ್ಲ. ಮನೆಯಲ್ಲಿ ಹಬ್ಬ, ವಿಶೇಷ ಪೂಜೆಯನ್ನು ಮಾಡುವಂತಿಲ್ಲ. ಈ ಅಂಶಗಳು ಎರಡು ಸಮುದಾಯಗಳಲ್ಲಿ ಸಾಮಾನ್ಯವಾಗಿವೆ.

ಋತುಮತಿಯಾದ ದಿನ ಆಕೆಯು ಸ್ನಾನ ಮಾಡುವ ನೀರಿಗೆ ಗಂಜಲದ ನೀರನ್ನು ಹಾಕುವುದು. ಆಕೆಗೆ ಪಂಚಲೋಹದ ಕಾಸನ್ನು ಬಾಳೆಹಣ್ಣಿನಲ್ಲಿಟ್ಟು ನುಂಗಿಸುವುದು ಮತ್ತು ಮೂರು ಬೇವಿನ ಗುಳಿಗೆಗಳನ್ನು ನುಂಗಿಸುವುದು ಕನ್ನಡ ದೇವಾಂಗದವರಲ್ಲಿರುವ ಪದ್ಧತಿ. ಆದರೆ ಇದು ತೊಗಟರಲ್ಲಿ ಕಾಣಬರುವುದಿಲ್ಲ. ಆಕೆಗೆ ಋತುಮತಿಯಾದ ಮೊದಲ ದಿನ ಒಣಕೊಬ್ಬರಿಯ ಬಟ್ಟಲಿನ ತುಂಬಾ ತುಪ್ಪವನ್ನು ತುಂಬಿ ಅದನ್ನು ಪೂರ್ತಿ ಕುಡಿಯಲು ಕೊಟ್ಟು ಒಣಕೊಬ್ಬರಿಯ ಬಟ್ಟಲನ್ನು ಪೂರ್ತಿ ತಿನ್ನಿಸುವರು. ಆದರೆ ಕನ್ನಡ ದೇವಾಂಗದವರು ಒಣಕೊಬ್ಬರಿಯ ಬಟ್ಟಲಿನ ತುಂಬಾ ಎಳ್ಳೆಣ್ಣೆಯನ್ನು ನೀಡಿ ಅದನ್ನು ಪೂರ್ತಿ ಕುಡಿಸಿ ಒಣಕೊಬ್ಬರಿಯ ಬಟ್ಟಲನ್ನು ಪೂರ್ತಿ ತಿನ್ನಿಸುವರು. ಆಕೆಗೆ ಮೂರನೇ ದಿನ, ಐದನೇ ದಿನ, ಒಂಬತ್ತು, ಹನ್ನೊಂದು ಮತ್ತು ಹದಿನಾರನೇ ದಿನ ಒಸಗೆಯನ್ನು ಹಾಕುವರು. ಈ ಹದಿನಾರನೇ

ದಿನ ಹಾಕುವ ಒಸಗೆಯೇ ದೊಡ್ಡ ಒಸಗೆಯಾಗಿದೆ. ಆದರೆ ತೊಗಟರು ಒಂಬತ್ತನೆಯ ದಿನವೇ ದೊಡ್ಡ ಒಸಗೆಯನ್ನು ಹಾಕಿ ಆಕೆಯಿಂದ ಹೊಸ್ತಿಲನ್ನು ಪೂಜೆ ಮಾಡಿಸಿ, ಮನೆಯ ಒಳಗೆ ಕರೆದುಕೊಂಡು ಬರುವರು. ಜೊತೆಗೆ ಸೋದರಮಾವನಿಂದ ಆಕೆಗೆ ಆಶೀರ್ವಾದವನ್ನು ಮಾಡಿಸುವರು.

**ಮರಣ ಸಂಬಂಧಿತ ಆಚರಣೆಗಳಲ್ಲಿನ ಸಾಮ್ಯತೆ ಮತ್ತು ಭಿನ್ನತೆ:**

ವ್ಯಕ್ತಿ ಮರಣ ಹೊಂದಿದ ದಿನ ಮೃತ ದೇಹವನ್ನು ಮನೆಯ ಹೊರಗೆ ಸೂಕ್ತ ಸ್ಥಳದಲ್ಲಿ ತಲೆಯು ದಕ್ಷಿಣ ದಿಕ್ಕಿಗೆ ಇರುವಂತೆ ಮಲಗಿಸಿ ತಲೆಯ ಬಳಿ ಒಂದು ಮಣ್ಣಿನ ದೀಪ ಹೊತ್ತಿಸುವರು. ಮೂಗು, ಕಿವಿಗಳಿಗೆ ಹತ್ತಿಯನ್ನು ಇಡುವರು, ಬಾಯಿಗೆ ಜಜ್ಜಿದ ಎಲೆ-ಅಡಿಕೆಯನ್ನು ಇಡುವರು. ನಾಮದವರಾದರೆ ಹಣೆಗೆ ನಾಮವನ್ನು, ಇತರರು ವಿಭೂತಿಯನ್ನು ಹಚ್ಚುವರು. ತಂದೆ ಮರಣ ಹೊಂದಿದ್ದರೆ ಹಿರಿಯ ಮಗ, ತಾಯಿ ಮರಣ ಹೊಂದಿದ್ದರೆ ಕಿರಿಯ ಮಗ ಕೊಳ್ಳಿ ಇಡುವರು ಹಾಗೂ ಇವರು ಮೃತ ದೇಹವನ್ನು ಹೊರುವಂತಿಲ್ಲ. ಇವರಲ್ಲಿ ಚಟ್ಟಕಟ್ಟುವ ಪದ್ಧತಿ ಇದೆ. ಮನೆಯ ಮುಂದೆ ಬೆಂಕಿ ಹಾಕಿ ಹೊಗೆ ಬರಿಸುವರು. ಮೃತದೇಹದ ಮೆರವಣಿಗೆ ನಡೆಯುತ್ತದೆ. ಶವಸಂಸ್ಕಾರದ ನಂತರ ಅಲ್ಲಿಯೇ ಕೈಕಾಲು ಮುಖ ತೊಳೆದುಕೊಂಡು, ಒಂದು ಎಲೆ ಒಂದು ಅಡಿಕೆಯನ್ನು ಅಗಿದು ದಾರಿಯ ಪಕ್ಕದಲ್ಲಿ ಉಗುಳುವರು. ಮೃತರ ಮನೆಗೆ ಹೋಗಿ ಅಲ್ಲಿಟ್ಟಿರುವ ದೀಪವನ್ನು ನೋಡಿ ಸೂರ್ಯಾಸ್ತಮದ ಒಳಗೆ ಮನೆಗಳಿಗೆ ಎಲ್ಲರೂ ಹಿಂತಿರುಗುವರು. ಮೂರು ಮತ್ತು ಐದನೇ ದಿನ ಹಾಲು ತುಪ್ಪ ಬಿಡುವ ಆಚರಣೆ, ಹನ್ನೊಂದನೇ ದಿನಕ್ಕೆ ತಿಥಿಕಾರ್ಯ ಮಾಡುವರು. ಸಮಾಧಿಯ ಬಳಿ ನಾಮದವರು ಮಾಂಸಾಹಾರವನ್ನು, ಉಳಿದವರು ಸಸ್ಯಹಾರವನ್ನು ಎಡೆ ಇಡುವ ಪದ್ಧತಿ ಇದೆ. ನಂತರ ಒಂದು ವರ್ಷದ ತಿಥಿ ಕಾರ್ಯ ಮಾಡುವರು. ಈ ಎಲ್ಲಾ ಅಂಶಗಳ ವಿಚಾರದಲ್ಲಿ ಎರಡೂ ಸಮುದಾಯಗಳು ಸಾಮ್ಯತೆಯನ್ನು ಹೊಂದಿವೆ.

ತೊಗಟವೀರರಲ್ಲಿ ವ್ಯಕ್ತಿ ಮರಣ ಹೊಂದಿದಾಗ ಅವರನ್ನು ಹೂಳುವ ಪದ್ಧತಿ ಇದೆ. ಆದರೆ ಕನ್ನಡ ದೇವಾಂಗದವರು ಹೆಚ್ಚಾಗಿ ಸುಡುವ ಪದ್ಧತಿಯನ್ನು ಅನುಸರಿಸುವರು. ಮನೆಯ ಮುಂದೆ ಹಾಕಿರುವ ಬೆಂಕಿಯಲ್ಲಿಯೇ ಮಡಕೆ ಇಟ್ಟು ಅದರಲ್ಲಿ ಅನ್ನ ಬೇಯಿಸಿ ಅದನ್ನು ಶವಸಂಸ್ಕಾರ ನಡೆಯುವ ಸಂದರ್ಭದಲ್ಲಿ ಆ ಅನ್ನಕ್ಕೆ ಎಳ್ಳನ್ನು ಮಿಶ್ರ ಮಾಡಿ ಅದನ್ನು ಎರಡೂ ಕೈಗಳಲ್ಲಿ ಬೆನ್ನ ಹಿಂದೆ ಕತ್ತರಿಯ ಹಾಗೆ ಹಿಡಿದು ತರ್ಪಣ ಬಿಡುವುದು ಕನ್ನಡ ದೇವಾಂಗದವರಲ್ಲಿದೆ. ಆದರೆ ತೊಗಟರು ಈ ಪದ್ಧತಿಯನ್ನು ಅನುಸರಿಸುವುದಿಲ್ಲ. ಮೃತದೇಹವನ್ನು ಮೆರವಣಿಗೆ ಮಾಡಿ ಶವಸಂಸ್ಕಾರದ ಜಾಗಕ್ಕೆ ತಂದಾಗ ಮೃತದೇಹವನ್ನು ಗುಂಡಿಯ ಸುತ್ತ ಮೂರು ಬಾರಿ ಪ್ರದಕ್ಷಿಣೆ ಹಾಕಿ ಕೆಳಗೆ ಇಳಿಸುವರು. ಆದರೆ ಕನ್ನಡ ದೇವಾಂಗದವರು ಮೃತದೇಹವನ್ನು

ಸುಡುವ ಕಟ್ಟಿಗೆಗಳ ಮೇಲೆ ಮಲಗಿಸಿದ ನಂತರ ಕೊಳ್ಳಿ ಇಡುವ ವ್ಯಕ್ತಿ ಅಪ್ರದಕ್ಷಣಾಕಾರದಲ್ಲಿ ತುಂಬಿದ ನೀರಿನ ಮಡಕೆಯನ್ನು ಹೊತ್ತು ಮೂರು ಸುತ್ತು ಸುತ್ತುವರು. ಶವಸಂಸ್ಕಾರದ ನಂತರ ಕೊಳ್ಳಿ ಇಟ್ಟ ವ್ಯಕ್ತಿಯು ಸೂರ್ಯಾಸ್ತಮದ ಒಳಗೆ ಮನೆಗೆ ಬಂದು ಹನ್ನೊಂದನೇ ದಿನದ ತಿಥಿ ಕಾರ್ಯ ಮುಗಿಯುವವರೆಗೆ ಹುಳಿ ಅನ್ನವನ್ನೇ ಸೇವಿಸಬೇಕು ಎಂಬ ನಿಯಮವಿದೆ. ಆದರೆ ಈ ನಿಯಮ ತೊಗಟರಲ್ಲಿ ಇಲ್ಲ. ಹನ್ನೊಂದನೇ ದಿನದ ತಿಥಿಗೆ ಕನ್ನಡ ದೇವಾಂಗದವರು ಸಸ್ಯಾಹಾರವನ್ನು ಉಣಬಡಿಸಿದರೆ, ತೊಗಟರು ಸಮಾಧಿಯ ಬಳಿ ಹೋಗಿ ಅಲ್ಲಿ ಮೂರು ಎಡೆ ಮಾಂಸಾಹಾರವನ್ನು ಇಟ್ಟು ಕಾಗೆ ಬಂದು ಮುಟ್ಟುವವರೆಗೆ ಅಲ್ಲಿಯೇ ಇದ್ದು ನಂತರ ಮನೆಗೆ ಬಂದು ಪೂಜೆ ಮಾಡಿದ ನಂತರ ಬಂಧು ಮಿತ್ರರಿಗೆ ಮಾಂಸಾಹಾರವನ್ನೇ ಉಣಬಡಿಸುವರು. ವ್ಯಕ್ತಿ ಸತ್ತ ಒಂದು ತಿಂಗಳು ಮುಗಿಯುವಷ್ಟರಲ್ಲಿ ಶ್ರೀರಂಗಪಟ್ಟಣಕ್ಕೆ ಹೋಗಿ ಪಿಂಡಪ್ರದಾನ ಮಾಡುವ ಪದ್ಧತಿ ಇವರಲ್ಲಿದೆ ಹಾಗೂ ಹರಿಯುವ ನದಿ ನೀರಿನಲ್ಲಿ ಸ್ನಾನ ಮಾಡಬೇಕೆಂಬ ನಿಯಮವಿದೆ. ಆದರೆ ಕನ್ನಡ ದೇವಾಂಗದವರು ಐದನೇ ದಿನಕ್ಕೆ ಶ್ರೀರಂಗಪಟ್ಟಣಕ್ಕೆ ಹೋಗುವರು ಹಾಗೂ ಒಂದು ವರ್ಷದ ತಿಥಿ ನಡೆಯುವವರೆಗೂ ಮನೆಯಲ್ಲಿ ಪ್ರತಿ ತಿಂಗಳು ತಿಥಿಕಾರ್ಯ ಮಾಡುವರು, ಯಾವುದೇ ಹಬ್ಬವನ್ನು ಆಚರಿಸುವುದಿಲ್ಲ, ತೆಂಗಿನಕಾಯಿ ಹೊಡೆಯುವುದಿಲ್ಲ. ಆದರೆ ತೊಗಟರು ಪ್ರತಿ ತಿಂಗಳು ತಿಥಿ ಮಾಡುವ ಪದ್ಧತಿ ಇಲ್ಲ. ಹನ್ನೊಂದನೇ ದಿನ ತಿಥಿ ಕಾರ್ಯ ಮಾಡಿದ ನಂತರ ಸಂಪೂರ್ಣ ಸೂತಕವನ್ನು ಕಳೆದುಕೊಂಡಂತೆ ಹಾಗೂ ಒಂದು ತಿಂಗಳ ಮುಂಚೆ ಶ್ರೀರಂಗಪಟ್ಟಣಕ್ಕೆ ಹೋಗಿ ಪಿಂಡಪ್ರದಾನ ಮಾಡಿ ಬಂದರೆ ಆನಂತರ ಎಲ್ಲವೂ ಸಾಮಾನ್ಯವಾಗಿ ಆಚರಣೆಗಳನ್ನು ಮಾಡುವರು.

**ಮದುವೆ ಸಂಬಂಧಿತ ಆಚರಣೆಗಳಲ್ಲಿನ ಸಾಮ್ಯತೆ ಮತ್ತು ಭಿನ್ನತೆ:**

ಎರಡೂ ಸಮುದಾಯದವರಲ್ಲಿ ಬೇರೆ ಗೋತ್ರದವರೊಂದಿಗೆ ವೈವಾಹಿಕ ಸಂಬಂಧ ಬೆಳೆಸುವ ಮತ್ತು ಹೆಣ್ಣನ್ನು ಕೊಟ್ಟು ತೆಗೆದುಕೊಳ್ಳುವ ಪದ್ಧತಿ ಇದೆ. ಮೊದಲಿಗೆ ಗಂಡು, ಹೆಣ್ಣನ್ನು ನೋಡಲು ಹೆಣ್ಣಿನ ಮನೆಗೆ ಹೋಗುವರು ಅಥವಾ ಹೆಣ್ಣನ್ನು ದೇವಾಲಯದಲ್ಲಿ ನೋಡುವರು. ವೀಳ್ಯಶಾಸ್ತ್ರ, ನಿಶ್ಚಿತಾರ್ಥದ ಶಾಸ್ತ್ರ, ಅರಿಶಿಣ ಶಾಸ್ತ್ರ, ನೆಲ್ಲು ಕುಟ್ಟುವ ಶಾಸ್ತ್ರ ಎರಡೂ ಸಮುದಾಯದವರಲ್ಲಿ ಸಾಮಾನ್ಯವಾಗಿದೆ. ಚಪ್ಪರದ ದಿನ ಹಾಲುಗಂಬ ನೆಟ್ಟು ಅರಿಶಿಣದ ಬಟ್ಟೆಯಲ್ಲಿ ನವಧಾನ್ಯಗಳನ್ನು ಹಾಕಿ ಸಣ್ಣ ಗಂಟು ಕಟ್ಟಿ ಕಂಬಕ್ಕೆ ಕಟ್ಟುವರು. ನೆಲ್ಲು ಕುಟ್ಟುವ ಶಾಸ್ತ್ರ, ಬಳೆ ಶಾಸ್ತ್ರಕ್ಕೆ ಮತ್ತು ಅರಿಶಿಣ ಶಾಸ್ತ್ರಕ್ಕೆ ಐದು ಅಥವಾ ಒಂಬತ್ತು ಜನ ಮುತ್ತೈದೆಯರನ್ನು ಕರೆಸುವುದು. ಅರಿಶಿನ ಶಾಸ್ತ್ರದಲ್ಲಿ ಮದುವೆ ಹೆಣ್ಣು ಮತ್ತು ಗಂಡಿಗೆ ಸೋದರಮಾವನೇ ಕಾಲುಂಗುರ ಮತ್ತು ಮಿಂಚನ್ನು ತೊಡಿಸುವುದು. ಮೂರು ಸುತ್ತು ಮುತ್ತೈದೆಯರು ಅರಿಶಿನ ಹಚ್ಚುವರು. ನೆಲ್ಲಿನಿಂದ ಹಸೆ ಬರೆದು ಅದರ ಮೇಲೆ ಮಣೆ ಹಾಕಿ ಅರಿಶಿಣ ಶಾಸ್ತ್ರಕ್ಕೆ

ಗಂಡು ಹೆಣ್ಣನ್ನು ಕೂರಿಸುವರು. ಗಂಡು ಮತ್ತು ಹೆಣ್ಣನ್ನು ಒಟ್ಟಿಗೆ ಕೂರಿಸಿ ಅರಿಶಿನ ಹಚ್ಚುವುದಿಲ್ಲ, ಒಬ್ಬರಾದ ನಂತರ ಮತ್ತೊಬ್ಬರನ್ನು ಕೂರಿಸಿ ಅರಿಶಿನವನ್ನು ಹಚ್ಚುವರು. ಕಾಶಿಯಾತ್ರೆ ಶಾಸ್ತ್ರ, ಸಪ್ತಪದಿ ಶಾಸ್ತ್ರ, ಬಾಗಿಲು ತಡೆಯುವ ಶಾಸ್ತ್ರ ಮಾಡುವರು. ಹೊಸ್ತಿಲ ಮೇಲೆ ಇಟ್ಟಿರುವ ಸೇರನ್ನು ಹೆಣ್ಣು ಬಲಗಾಲಿನಲ್ಲಿ ಒದ್ದು ಮನೆಯನ್ನು ಪ್ರವೇಶಿಸುವುದು. ಮಡಿಲಕ್ಕಿಯ ಗಂಟನ್ನು ತುಂಬಿದ ಕೊಡದ ಮೇಲೆ ಇರಿಸಿ ದೇವರಮನೆಗೆ ಹೋಗಿ ದೀಪ ಹಚ್ಚಿ ಪೂಜಿಸುವುದು, ಅಡುಗೆ ಮನೆಯಲ್ಲಿ ಒಲೆ ಹಚ್ಚಿ ಹಾಲನ್ನು ಉಕ್ಕಿಸಿ ಸಿಹಿ ಮಾಡುವುದು ಇವೆಲ್ಲವೂ ಎರಡೂ ಸಮುದಾಯಗಳಲ್ಲಿ ಆಚರಣೆಯಲ್ಲಿವೆ. ನಂತರ ನಿಷೇಕದ ಶಾಸ್ತ್ರ ನಡೆಯುತ್ತದೆ, ಇದರ ನಂತರ ಬೀಗರೂಟ, ನಂತರ ಮದುವೆಯಾಗಿ ಒಂದು ತಿಂಗಳು ತುಂಬುವುದಕ್ಕೆ ಮುಂಚೆ ಚಪ್ಪರ ತೆಗೆಯುವ ಶಾಸ್ತ್ರ ನಡೆಯುತ್ತದೆ. ನಂತರ ಕರಿಮಣಿ ಪೋಣಿಸುವ ಶಾಸ್ತ್ರ ಎರಡೂ ಸಮುದಾಯಗಳಲ್ಲಿ ಇದೆ. ಇವರು ತಟ್ಟೆಯಾಕಾರದ ತಾಳಿಯನ್ನು ಬಳಸುವರು ಹಾಗೂ ಎರಡು ಲಕ್ಷ್ಮೀಕಾಸನ್ನು ಕರಿಮಣಿ ದಾರದಲ್ಲಿ ಪೋಣಿಸುವರು. ಈ ಶಾಸ್ತ್ರವನ್ನು ಹೆಣ್ಣಿನ ತವರು ಮನೆಯಲ್ಲಿ ಮಾಡುವರು. ಹೆಣ್ಣಿನ ತಾಯಿ ಕರಿಮಣಿ ಸರವನ್ನು ಪೋಣಿಸುವುದಿಲ್ಲ. ಈ ಎಲ್ಲ ಬಗೆಯ ಶಾಸ್ತ್ರಗಳಲ್ಲಿನ ಸಾಕಷ್ಟು ವಿಚಾರಗಳಲ್ಲಿ ಎರಡು ಸಮುದಾಯಗಳು ಸಾಮ್ಯತೆಯ ಅಂಶಗಳನ್ನು ಹೊಂದಿವೆ.

ತೊಗಟರಲ್ಲಿ ಗೋತ್ರಗಳಿದ್ದರೂ ಬೆಡಗುಗಳು ಇಲ್ಲ. ಆದರೆ ಕನ್ನಡ ದೇವಾಂಗದವರಲ್ಲಿ ಬೆಡಗುಗಳಿವೆ ಮತ್ತು ಮದುವೆಯು ನಿಶ್ಚಯವಾಗುವುದಕ್ಕೆ ಮುಂಚೆ ದೇವರಲ್ಲಿ 'ಹೂ ಕೇಳುವ ಪದ್ಧತಿ' ಇದೆ. ಗಂಡು-ಹೆಣ್ಣು ಇಬ್ಬರ ಜಾತಕಗಳನ್ನು ದೇವರ ಮುಂದಿರಿಸಿ ಹೂವು ಕೇಳಿದಾಗ ಬಲಗಡೆ ಹೂವು ನೀಡಿದರೆ ಮದುವೆಯಾಗಬಹುದೆಂದು, ಎಡಗಡೆ ಹೂ ನೀಡಿದರೆ ವಿವಾಹವಾಗಬಾರದೆಂಬ ನಂಬಿಕೆ ಇದೆ. ಆದರೆ ಇದು ತೊಗಟರಲ್ಲಿ ಇಲ್ಲ. ನಿಶ್ಚಿತಾರ್ಥದ ದಿನ ಊಟದ ನಂತರ ಮದುವೆ ಹೆಣ್ಣು ಗಂಡಿನ ಮನೆಗೆ ಬಂದು ಹೊಸ್ತಿಲು ಪೂಜೆ ಮಾಡುವ ಪದ್ಧತಿ ಕನ್ನಡ ದೇವಾಂಗದವರಲ್ಲಿ ಇದೆ ಮತ್ತು ನಿಶ್ಚಿತಾರ್ಥದ ದಿನ ಇಬ್ಬರಿಗೂ ನವಧಾನ್ಯಗಳ ಸಣ್ಣ ಗಂಟೊಂದನ್ನು ಕೊಟ್ಟು ಅದನ್ನು ಚಪ್ಪರದ ದಿನ ಆ ಗಂಟನ್ನು ಬಿಚ್ಚಿ ಹೆಣ್ಣು ಮತ್ತು ಗಂಡು ಚಪ್ಪರದ ಮೇಲೆ ಹಾಕುವರು ಮತ್ತು ಅಂದು 'ಕಿಚಡಿ ಕಾಯಿ ಹಾಲು' ಎಂಬ ಸಿಹಿಯನ್ನೇ ಮಾಡುವರು. ಆದರೆ ಇದು ತೊಗಟರಲ್ಲಿ ಇಲ್ಲ. ಅರಿಶಿನ ಹಚ್ಚುವ ಶಾಸ್ತ್ರದಲ್ಲಿ ವರನ ಜೊತೆ ಒಬ್ಬ ಹುಡುಗನನ್ನು ವಧುವಿನ ಜೊತೆ ಒಂದು ಹುಡುಗಿಯನ್ನು ಜೊತೆಯಲ್ಲಿ ಕೂರಿಸಿ ಎರಡು ಸುತ್ತು ಮಾತ್ರ ಅರಿಶಿನ ಹಚ್ಚುವರು. ಆದರೆ ಮೂರನೇ ಸುತ್ತಿಗೆ ವರನ ಜೊತೆ ಒಬ್ಬ ಮದುವೆಯಾದ ಗಂಡನ್ನು ಕೂರಿಸಿ ಹಾಗೂ ವಧುವಿನ ಜೊತೆ ಮದುವೆಯಾದ ಸ್ತ್ರೀಯನ್ನು ಕೂರಿಸಿ ಅರಿಶಿನ ಹಚ್ಚುವರು. ಆದರೆ ಈ ರೀತಿ ಅರಿಶಿಣ ಹಚ್ಚುವ ಪದ್ಧತಿ ತೊಗಟರಲ್ಲಿ ಇಲ್ಲ. ತೊಗಟರಲ್ಲಿ ಮೂರು

ಸುತ್ತು ಅರಿಶಿನವನ್ನು ಹಚ್ಚಲು ಚಿಕ್ಕ ಹುಡುಗ ಮತ್ತು ಚಿಕ್ಕ ಹುಡುಗಿಯನ್ನಷ್ಟೇ ಕೂರಿಸುವರು. ಕನ್ನಡ ದೇವಾಂಗದವರಲ್ಲಿ ಕಳಸವನ್ನು ಸೋದರತ್ತೆ ಹೊರುವವರು. ಆದರೆ ತೊಗಟರಲ್ಲಿ ಕಳಸವನ್ನು ಹೊರುವುದು ಸೋದರಮಾವ. ಕನ್ನಡ ದೇವಾಂಗದವರು ಅರಿಶಿಣ ಶಾಸ್ತ್ರದ ನಂತರ ಗಂಡಿಗೆ 'ಬಿಡದಿಗೆ ಬಿಡುವ ಶಾಸ್ತ್ರ' ಮಾಡಿಸುವರು ಹಾಗೂ ಗಂಡು ಹೆಣ್ಣು ಇಬ್ಬರಿಂದಲೂ 'ನಾಂದೀ ಪೂಜೆ' ಮಾಡಿಸುವುದು ಕಂಡುಬರುತ್ತದೆ. ಮದುವೆ ಮಂಟಪದಲ್ಲಿ ಗಂಡು ಹೆಣ್ಣನ್ನು ಕೂರಿಸಿ ನಂತರ ತಾಳಿ ಇರಿಸಿರುವ ತೆಂಗಿನಕಾಯಿಗೆ ಐವರು ದಂಪತಿಯರಿಂದ ಹಾಲನ್ನು ಎರೆಸುವರು. ಆದರೆ ತೊಗಟರಲ್ಲಿ ಮಾಂಗಲ್ಯ ಧಾರಣೆಯಾದ ನಂತರ ಗಂಡಿನ ಕೈ ಮೇಲೆ ಹೆಣ್ಣಿನ ಕೈಯನ್ನು ಇರಿಸಿ ಅವರ ಕೈಗಳ ಮೇಲೆ ತೆಂಗಿನಕಾಯಿಯನ್ನು, ಎಲೆ ಅಡಿಕೆ ಮತ್ತು ಒಂದು ನಾಣ್ಯವನ್ನು ಇರಿಸಿ ಎಲ್ಲರಿಂದಲೂ ಹಾಲನ್ನು ಎರೆಸುವರು. ಮದುವೆ ಹೆಣ್ಣನ್ನು ಗಂಡನ ಮನೆಗೆ ಕರೆದುಕೊಂಡು ಬಂದ ಮೇಲೆ ಮಡಿಲಕ್ಕಿಯ ಗಂಟನ್ನು ದೇವರ ಕೋಣೆಯಲ್ಲಿ ಇರಿಸಿರುವ ತುಂಬಿದ ಕೊಡದ ಮೇಲೆ ಕನ್ನಡ ದೇವಾಂಗದವರು ಇರಿಸಿದರೆ ತೊಗಟರು ಅಡುಗೆ ಮನೆಯಲ್ಲಿ ಇರುವ ತುಂಬಿದ ನೀರಿನ ಕೊಡದ ಮೇಲೆ ಮಡಿಲಕ್ಕಿಯ ಗಂಟನ್ನು ಇರಿಸುವರು ಮತ್ತು ನಿಷೇಕದ ಶಾಸ್ತ್ರವನ್ನು ಮುಂದಿನ ಮೂರು ದಿನಗಳ ನಂತರ ಸೂಕ್ತ ದಿನವನ್ನು ಪುರೋಹಿತರಿಂದ ತಿಳಿದು ನಡೆಸುವರು. ಆದರೆ ಕನ್ನಡ ದೇವಾಂಗದವರಲ್ಲಿ ಹರಕೆಗಳೇನಾದರೂ ಮಾಡಿಕೊಂಡಿದ್ದರೆ ಮಾತ್ರ ನಿಷೇಕದ ಶಾಸ್ತ್ರವನ್ನು ಮುಂದಿನ ದಿನಕ್ಕೆ ವರ್ಗಾಯಿಸುತ್ತಾರೆ. ಇಲ್ಲವೆಂದರೆ ಮದುವೆಯಾದ ದಿನವೇ ನಿಷೇಕದ ಶಾಸ್ತ್ರವನ್ನು ಮಾಡುತ್ತಾರೆ ಹಾಗೂ ಬೀಗರೂಟಕ್ಕೆ ಸಸ್ಯಾಹಾರವನ್ನು ಮಾಡಿಸಿದರೆ ತೊಗಟರು ಬೀಗರೂಟಕ್ಕೆ ಮಾಂಸಾಹಾರವನ್ನೇ ಮಾಡಿಸುವರು.

ಹೀಗೆ ತೊಗಟವೀರ ಕ್ಷತ್ರಿಯ ಮತ್ತು ಕನ್ನಡ ದೇವಾಂಗ ಸಮುದಾಯಗಳ ಹಲವು ಆಚರಣೆಗಳಲ್ಲಿ ಸಾಮ್ಯತೆಗಳಿದ್ದರೂ ಬಹಳಷ್ಟು ಶಾಸ್ತ್ರಗಳಲ್ಲಿ ಭಿನ್ನತೆಗಳಿವೆ. ಮುಖ್ಯವಾಗಿ ತೊಗಟರಲ್ಲಿ ಜನಿವಾರ ಧರಿಸುವ ಪದ್ಧತಿ ಇಲ್ಲ. ಆದರೆ ಕನ್ನಡ ದೇವಾಂಗದವರಲ್ಲಿ ಜನಿವಾರ ಧರಿಸುವ ಪದ್ಧತಿ ಇದೆ. ತೊಗಟರಲ್ಲಿ ಜನಿವಾರದ ಬಗೆಗೆ ಒಂದು ದಂತ ಕಥೆ ಇದೆ. ಅದೇನೆಂದರೆ, ಬಹಳ ಹಿಂದಿನ ಕಾಲದಲ್ಲಿ ತೊಗಟರ ಹಿರಿಯರು ಮಾಂಸಾಹಾರ ಸೇವನೆ ಮಾಡುವಾಗ ಮೂಳೆಯನ್ನು ಬಾಯಿಗಿಡುವಾಗ ಜನಿವಾರ ಎರಡು ಮೂರು ಬಾರಿ ಅದಕ್ಕೆ ಸಿಕ್ಕಿಹಾಕಿಕೊಂಡಿತ್ತಂತೆ. ಇದರಿಂದ ಕೋಪಗೊಂಡ ಆ ಹಿರಿಯ ವ್ಯಕ್ತಿ ಮಾಂಸ ತಿನ್ನಲು ಜನಿವಾರ ಅಡ್ಡಿಯಾಯಿತೆಂದು ಅದನ್ನು ತೆಗೆದು ಹಾಕಿದರಂತೆ. ಅಂದಿನಿಂದ ತೊಗಟರು ಜನಿವಾರ ಧರಿಸುವುದಿಲ್ಲವಂತೆ. ಮತ್ತೊಂದು ದಂತಕತೆಯ ಪ್ರಕಾರ ಚೌಡೇಶ್ವರಿ ದೇವಿಯನ್ನು ಈ ಎರಡೂ ಸಮುದಾಯದವರು ಆರಾಧಿಸುತ್ತಿದ್ದರು. ಆದರೆ

ತೊಗಟರು ಮಾಂಸಾಹಾರಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿ ದೇವಿಗೆ ಮಾಂಸಾಹಾರವನ್ನೇ ಎಡೆಯಾಗಿ ಇಡುತ್ತಿದ್ದರಂತೆ. ಆದರೆ ಸಸ್ಯಾಹಾರವನ್ನೇ ಹೆಚ್ಚಾಗಿ ಇಷ್ಟಪಡುತ್ತಿದ್ದ ಮತ್ತೊಂದು ಗುಂಪು ಮಾಂಸಾಹಾರದ ಎಡೆಯನ್ನು ವಿರೋಧಿಸಿ ಇವರಿಂದ ಪ್ರತ್ಯೇಕಗೊಂಡರು. ಹೀಗೆ ಪ್ರತ್ಯೇಕಗೊಂಡವರೇ ದೇವಾಂಗದವರು ಎಂಬ ಕಥೆ ಇದೆ. ಈ ಎರಡೂ ಸಮುದಾಯಗಳಲ್ಲಿ ತೊಗಟವೀರ ಕ್ಷತ್ರಿಯ ಸಮುದಾಯ ತಮ್ಮ ಬುಡಕಟ್ಟು ಮೂಲದ ಹಲವು ಲಕ್ಷಣಗಳನ್ನು ಉಳಿಸಿಕೊಂಡರೂ ಅಲ್ಪ ಪ್ರಮಾಣದಲ್ಲಿ ಸಂಸ್ಕೃತೀಕರಣಕ್ಕೆ ಮತ್ತು ಬ್ರಾಹ್ಮಣೀಕರಣಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಆದರೆ ಕನ್ನಡ ದೇವಾಂಗದವರು ಅಧಿಕ ಪ್ರಮಾಣದಲ್ಲಿ ವೈದಿಕ ಶಾಹಿಯ ಪ್ರಭಾವಕ್ಕೆ ಒಳಗಾಗಿರುವರು ಎಂಬುದನ್ನು ಸಮುದಾಯದ ಈ ಕೆಲವು ಆಚರಣೆಗಳ ಮೂಲಕ ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಗುತ್ತದೆ.

### ಕೊನೆ ಟಿಪ್ಪಣಿಗಳು:

1. ಮಹದೇವ ಸಿ. (ಸಂ), (2014), ನೇಕಾರ ಸಮಾಜ: ಸಂಸ್ಕೃತಿ ಆರ್ಥಿಕ ಸ್ಥಿತಿಗತಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 15
2. ವಿಠ್ಠಪ್ಪ ಗೊರಂಟ್ಲಿ, (2017), ಪದ್ಮಶಾಲಿ ಸಮಾಜ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 63

### ಪರಾಮರ್ಶನ ಗ್ರಂಥಗಳು:

1. ಮಹದೇವ ಸಿ. (ಸಂ), (2014), ನೇಕಾರ ಸಮಾಜ: ಸಂಸ್ಕೃತಿ ಆರ್ಥಿಕ ಸ್ಥಿತಿಗತಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ವಿಠ್ಠಪ್ಪ ಗೊರಂಟ್ಲಿ, (2017), ಪದ್ಮಶಾಲಿ ಸಮಾಜ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.